ಆ) ಉದ್ಭವಿಸುವುದಿಲ್ಲ

ಅಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಮಂಡಿಸಲಾಯಿತು.

(2) ಪ್ರಕಟಣೆ

ಅಧ್ಯಕ್ಷರು :- ವಿಧಾನಸಭಾ ಸದಸ್ಯರುಗಳಾದ ಶ್ರೀ ಎಸ್. ಶಿವಶಂಕರಪ್ಪ, ಶ್ರೀ ಸಿ. ಹೆಚ್. ವಿಜಯ ಶಂಕರ್ ಹಾಗೂ ಶ್ರೀ ಆಯನೂರು ಮಂಜುನಾಥ್ ಇವರುಗಳು ವಿಧಾನಸಭಾ ಸದಸ್ಯತ್ವಕ್ಕೆ ದಿನಾಂಕ 20.3.98 ರಂದು ರಾಜೀನಾಮೆ ನೀಡಿದ್ದು ಸದಸ್ಯರುಗಳ ರಾಜೀನಾಮೆಗಳನ್ನು ದಿನಾಂಕ 20.3.98 ರಿಂದ ಜಾರಿಗೆ ಬರುವಂತೆ ಅಂಗೀಕರಿಸಿದ್ದೇನೆ.

3) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ರೈತರ ಆತ್ಮಹತ್ಯೆಗೆ ಸಂಬಂಧ ಪಟ್ಟಂತೆ

ಅಧ್ಯಕ್ಷರು :- ಮಾನ್ಯ ಖರ್ಗೆಯವರೆ, ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪಿಸಲು ತಾವು ಹಾಗೂ ಇನ್ನಿತರ ಸುಮಾರು ಜನರು ನೋಟೀಸ್ ಕೊಟ್ಟಿದ್ದೀರಿ. About 10-11 hon. members have expressed their desire to make a mention during Zero Hour. ನಾನು ಏನು ಹೇಳುತ್ತೇನೆಂದರೆ, ಇದರ ಬಗ್ಗೆ 10- 12 ಜನ ಸದಸ್ಯರಿಗೆ ವ್ಯಾಪಕವಾದ ಚರ್ಚೆಗೆ ಅವಕಾಶ ಮಾಡಿಕೊಡುವುದರ ಬದಲು ನೀವೆಲ್ಲರೂ ಒಪ್ಪಿದರೆ ಈಗ ಕೈಗೆತ್ತಿಕೊಂಡಿರುವ ಚರ್ಚೆಯನ್ನು ಮುಗಿಸಿದ ತಕ್ಷಣ ಅರ್ಧ ಗಂಟೆ ಕಾಲಾವಧಿ ಚರ್ಚೆಯಾಗಿ ನಂತರ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಇದನ್ನು ಈಗಲೇ ತೆಗೆದುಕೊಳ್ಳಿ, ಇದು ಬಹಳ ಮುಖ್ಯವಾಗಿದೆ. ಏಕೆಂದರೆ, ತಮಗೆ ಗೊತ್ತಿರುವಂತೆ ಪದೇ ಪದೇ ಈ ವಿಷಯವನ್ನು ಪ್ರಸ್ತಾಪಿಸಿ ಬೆಳೆಯಿಂದ ನಷ್ಟಕ್ಕೀಡಾಗಿರುವ ರೈತರಿಗೆ ಪರಿಹಾರ ಕೊಡುವ ಬಗ್ಗೆ....

ಅಧ್ಯಕ್ಷರು :- ಹಾಗಾದರೆ, ಒಂದು ಕೆಲಸ ಮಾಡಿ, there are some small items. We will take it up as a last subject. Then we will go to regular business. ಆಗಬಹುದೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈ ವಿಷಯ ಮುಗಿದ ನಂತರ ಬೇಕಾದರೆ ಕೊನೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು :- ಇದನ್ನು ಲಾಸ್ಟ್ ಐಟಂ ಆಗಿ ತೆಗೆದುಕೊಳ್ಳೋಣ.

(ಆ) ಕುಣಿಗಲ್ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) :- ಮಾನ್ಯ ಅಧ್ಯಕ್ಷರೇ, ಈಗ ನಾನು ಪ್ರಸ್ತಾಪಿಸುವ ವಿಷಯಕ್ಕೆ ಉತ್ತರಿಸಲು ನಗರಾಭಿವೃದ್ಧಿ ಸಚಿವರು ಸದನದಲ್ಲಿ ಇರಬೇಕಾಗಿತ್ತು. ಅವರು ಇಲ್ಲ.